ಅಸಲು ದಾವೆ ನಂಃ 402/2024

ಪಿ.ಡಬ್ಲೂ .1

**4 ನೇ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ ಧಾರವಾಡ.**

ಸತ್ಯ ಪ್ರತಿಜ್ಞೆ ಮಾಡಿಸಲಾಯಿತು ಃ **03.11.2025**

**ಪಾಟೀಸವಾಲುಃ ಪ್ರತಿವಾದಿ ಪರ ವಕೀಲರಿಂದ**

**1.** ನಾನು ದಾವೆಯಲ್ಲಿ ತೋರಿಸಿದ ವಿಳಾಸದಲ್ಲಿ ನನ್ನ ಗಂಡನ ಕಾಲದಿಂದ ವಾಸವಾಗಿದ್ದಾನೆ ಎಂದರೆ ಸರಿ. ನಾನು ವಾಸವಿರುವ ಮನೆ ನನ್ನ ತಂದೆಯ ಮನೆ. ಫಕ್ಕಿರವ್ವ ಯಮನಪ್ಪ ಆಲೂರು ಎಂದರೆ ನನ್ನ ಗಂಡನ ತಾಯಿ. ನಾನು ಹಾಗೂ ನನ್ನ ಮಗಳು ಅದೇ ಮನೆಯಲ್ಲಿ ಇದ್ದೆವೆ ಎಂದರೆ ಸರಿ. ನನ್ನ ಮಗಳು ಸರೋಜ. ನನ್ನ ಮಗ ಬ್ಯಾಂಕನಲ್ಲಿ ಪ್ಯೂನ ಆಗಿ ಕೆಲಸ ಮಾಡುತ್ತಿದ್ದ ಎಂದರೆ ಸರಿ. ನನ್ನ ಮಗ ಸಾಯುವ 1 ವರುಷ ಮೊದಲು ಆತನ ಎಡಗಾಲನ್ನು ಗ್ಯಾಂಗರಿನ್ ಅದ ಬಗ್ಗೆ ಕಟ್ ಮಾಡಿದ್ದರು ಎಂದರೆ ಸಾಕ್ಷಿ ಆತನ ಕಾಲಿಗೆ ಗಾಯವಾಗಿತ್ತು ಎನ್ನುತ್ತಾರೆ. ನನ್ನ ಮಗ ಸಾಯುವ 2-3 ವರುಷ ಮೊದಲೇ ಅನಾರೋಗ್ಯನಿಂದ ಬಳಲುತ್ತಿದ್ದ ಎಂದರೆ ಸಾಕ್ಷಿ ನನ್ನನ್ನು ಕರೆದುಕೊಂಡು ಹೊಗಿ ಆತನನ್ನು ತೋರಿಸಿಲ್ಲ ಎನ್ನುತ್ತಾರೆ. ಮದುವೆ ನಂತರ ನನ್ನ ಮಗ ಬೇರೆ ವಾಸ ಮಾಡುತ್ತಿದ್ದ ಎಂದರೆ ಸರಿ. 1 ನೇ ಪ್ರತಿವಾದಿ ನನ್ನ ಸೊಸೆ ಕುಂದಾಪೂರದವರು. ಮದುವೆಗೆ ನಾನು ಒಪ್ಪಿದ್ದಿಲ್ಲ. ಸಾಕ್ಷಿ ಮುಂದುವರೆದು ಅಕೆ ಬಹಳ ನೀಚ್ ಇದ್ದಾಳೆ ಎನ್ನುತ್ತಾರೆ. ನನ್ನ ಮತ್ತು ನನ್ನ ಸೊಸೆಯ ಮಧ್ಯ ಯಾವತ್ತು ಸಂಬಂದ

ಅಸಲು ದಾವೆ ನಂಃ 402/2024

ಪಿ.ಡಬ್ಲೂ .1

ಚೆನ್ನಾಗಿರಲಿಲ್ಲ ಎಂದರೆ ಸರಿ. ನನ್ನ ಮಗ ಎಷ್ಟು ಸಾಲ ಮಾಡಿದ್ದಾರೆ ಎಂದು ಗೊತ್ತಿಲ್ಲ ಎಂದರೆ ಸಾಕ್ಷಿ ನನ್ನ ಮಗ ಮನೆ ಕಟ್ಟಿರುತ್ತಾರೆ ಎಂದು ಹೇಳುತ್ತಾರೆ. ನಾನು ಮನೆಗೆ ಹೋದರೇ ಅವರು ನನ್ನನ್ನು ಆಚೆ ದಬ್ಬುತ್ತಿದ್ದರು. ಮದುವೆಗಿಂತ ಮೊದಲು ನಾನು ನನ್ನ ಮಗ ಚೆನ್ನಾಗಿದ್ದೆವು ನಂತರ ಚೆನ್ನಾಗಿರಲಿಲ್ಲ. ನನ್ನ ಮಗ ಸಾಯುವಕ್ಕಿಂತ ಮೊದಲು ಸಾಕಷ್ಟು ಕಡೆ ಸಾಲ ಮಾಡಿದ್ದ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ನನ್ನ ಮಗ ಸಾಲ ಮಾಡುತ್ತಿರಲಿಲ್ಲ ಎನ್ನುತ್ತಾರೆ.

2. ನನ್ನ ಮಗ ಎಸ್ ಬಿ ಐ ಬ್ಯಾಂಕನಲ್ಲಿ 3 ಲಕ್ಷ ಬಂಗಾರದ ಸಾಲ , ಹೆಚ್ ಡಿ ಬಿ ಬ್ಯಾಂಕನಲ್ಲಿ , ಕರ್ನಾಟಕ ಸೆಂಟ್ರಲ್ ಕೋ ಅಪರೇಟಿವ್ ಬ್ಯಾಂಕ , ಸುರ್ಯೋದಯ ಫೈನಾನ್ಸ, ಬಜಾಜ ಫೈನಾನ್ಸ , ಬೆಲ್ ಸ್ಟಾಫ್ ಪೆನಾನ್ಸ , ಪೆಡರಲ್ ಬ್ಯಾಂಕ , ಅಕ್ಸಸ್ ಬ್ಯಾಂಕ , ಶಾರದಾ ಮಹಿಳಾ ಬ್ಯಾಂಕ ಗಳಲ್ಲಿ ಮನೆ ಕಟ್ಟಲು ಹಾಗೂ ಆತನ ಚಿಕಿತ್ಸೆಗಾಗಿ ಸಾಲ ಮಾಡಿದ್ದ ಎಂದರೆ ನನಗೆ ಗೊತ್ತಿಲ್ಲ. ನನ್ನ ಮಗನಿಗೆ 3 ಜನ ಗಂಡು ಮಕ್ಕಳು. 1 ನೇ ಪ್ರತಿವಾದಿ ಯಾವದೇ ಕೆಲಸಕ್ಕೆ ಹೊಗುವುದಿಲ್ಲ ಎಂದರೆ ಸರಿ. 1 ರಿಂದ 4 ನೇ ಪ್ರತಿವಾದಿ ಸಾಕಷುಟ ತೊಂದರೆಯಲ್ಲಿದ್ದಾರೆ ಎಂದರೆ ಸಾಕ್ಷಿ ಅವರ ಪೈಕಿ ಒಬ್ಬರು ಕೆಲಸ ಮಾಡುತ್ತಾರೆ ಎನ್ನುತ್ತಾರೆ ಸದರಿಯವರು ಯಾವದೇ ಬ್ಯಾಂಕನಲ್ಲಿ ಕೆಲಸ ಮಾಡುತ್ತಿಲ್ಲ ಎಂದರೆ ಸರಿಯಲ್ಲ. ಸದರಿಯವರ ಪೈಕಿ ಒಬ್ಬರು ಬ್ಯಾಂಕನಲ್ಲಿ ಅನುಕಂಪದ ಅಧಾರದ ನೌಕರಿ ಅರ್ಜಿ ಸಲ್ಲಿಸಿದಾಗ ನಾನು ಅದಕ್ಕೆ ತಕರಾರು ಸಲ್ಲಿಸಿದ್ದೆನೆ ಎಂದರೆ ಸರಿಯಲ್ಲ. ಸದರಿ ತಕರಾರು ಕೊಟ್ಟಿದ್ದರಿಂದ ನನ್ನ ಮೊಮ್ಮಗನಿಗೆ ಕೆಲಸ

ಬರಲಿಲ್ಲ ಎಂದರೆ ಸರಿಯಲ್ಲ. ನಾನು ವಾಸವಿರುವ ಮನೆ ಹಾಗೂ ನನ್ನ ಮಗ ಕಟ್ಟಿಸಿರುವ ಮನೆ ದೂರದಲ್ಲಿ ಇವೆ ಎಂದರೆ ಸರಿ. ಸದರಿ ನನ್ನ ಮಗ ಕಟ್ಟಿಸಿದ ಮನೆ ಅಕ್ರಮ ಸಕ್ರಮ ಜಾಗದಲ್ಲಿದೆ ಎಂದರೆ ಸರಿ.

3. ನನ್ನ ಗಂಡ ತಿರಿಕೊಂಡು 3-4 ವರುಷವಾಗಿರುತ್ತದೆ. ನನಗೆ ವಿಧವಾ ವೇತನ ಬರುತ್ತದೆ ಎಂದರೆ ಸರಿ. ಅದೇ ರಿತಿ ಹಿರಿಯ ನಾಗರಿಕ ವೇತನ ಸಹ ಬರುತ್ತದೆ ಎಂದರೆ ಸರಿ. ನನಗೆ ರೇಷನ ಕಾರ್ಡ ಸಹ ಇದೆ ಎಂದರೆ ಸರಿ. ಸದರಿ ಸರಕಾರಿ ಸೌಲಭ್ಯದಿಂದ ನಾನು ಚೆನ್ನಾಗಿದ್ದೆನೆ ಎಂದರೆ ಸರಿಯಲ್ಲ. ನನ್ನ ಮಗ ಮೇಲೆ ಹೇಳಿದ ಬ್ಯಾಂಕನಲ್ಲಿ ಸಾಲ ಮಾಡಿದ್ದರಿಂದ ಪ್ರತಿವಾದಿಯವರಿಗೆ ಜೀವನ ನಡೆಸಲು ಕಷ್ಟವಾಗಿದೆ ಎಂದರೆ ಸರಿಯಲ್ಲ. ನನ್ನ ಮಗಳು ಹೇಳಿದ್ದಕ್ಕೆ ನನಗೆ ಅನುಕೂಲವಾಗುತ್ತದೆ ಎಂದು ದಾವೆ ಹಾಕಿರುತ್ತೇನೆ. ನನ್ನ ಮಗಳ ಮಾತು ಕೇಳಿ ಸುಳ್ಳು ದಾವೆ ಹಾಕಿದ್ದೆನೆ ಎಂದರೆ ಸರಿಯಲ್ಲ. ಪ್ರತಿವಾದಿ ಆಕೆಯ ಗಂಡನ ಆಸ್ತಿ ಯಲ್ಲಿ ಪಾಲು ಭಾಗ ಕೇಳಿದ್ದಕ್ಕೆ ಪ್ರತಿರೋಧವಾಗಿ ಈ ಸುಳ್ಳು ದಾವೆ ಹಾಕಿದ್ದೆನೆ ಎಂದರೆ ಸರಿಯಲ್ಲ. ನನ್ನ ಮಗನ ಸಾಲಕ್ಕೆ ನಾನು ಸಹ ಬಾಧ್ಯಸ್ಥಳು ಎಂದರೆ ಸಾಕ್ಷಿ ಸಾಲ ಮಾಡಿರುವ ವಿಚಾರ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸದರಿ ಸಾಲಕ್ಕೆ ನಾನು ಸಹ ಬಾಧ್ಯಸ್ಥಳು ಎಂದರೆ ಸರಿಯಲ್ಲ. ಈ ಕೇಸಿಗ ಮಾಹಿತಿಯನ್ನು ನಾನೇ ಕೊಟ್ಟಿರುತ್ತೇನೆ. ನನ್ನ ಮಗಳ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ.

ಅಸಲು ದಾವೆ ನಂಃ 402/2024

ಪಿ.ಡಬ್ಲೂ .1

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

**( ಆನಂದ ಎಸ್ ಕರಿಯಮ್ಮನವರ್)**
4 ನೇ ಹಿ ದಿ ನ್ಯಾಹಾಗೂ ಜೆಎಂಎಫ್‌ಸಿ,
ಧಾರವಾಡ.